"ಆಗ್ಲಿ ಮಾರಾಯ್ತೀ, ದೇವ್ರು ಒಳ್ಳೇದು ಮಾಡ್ಲಿ..."

"ದೇವ್ರ ವಿಷಯ ಬಿಟ್ಹಾಕು. ನೀನು ದೊಡ್ಡ ಮನಸ್ಸು ಮಾಡ್ಬೇಕು."

"ನಾನಾ? ಇಲ್ಲಿ ಕೂತ್ಗಂಡು ನಾನೇನು ಮಾಡೋಕೆ ಸಾಧ್ಯ?"

"ಅಲ್ಲೇ ಯಾಕೆ ಗೂಟ ಹೊಡ್ಕಂಡು ಕೂತಿರ್ತಿ? ಇಲ್ಲಿಗೆ ಬಾ. ನಿನ್ನ ಸೊಸೆ ಬಾಣಂತನ ನೀನೇ ಮಾಡು..."

"ಹುಚ್ಚನೇ ನಿಂಗೆ?"

"ಹುಚ್ಚೂ ಅಲ್ಲ, ಬೆಪ್ಪೂ ಅಲ್ಲ. ನನ್ನ ಬಾಣಂತನ ನೀನೇ ಮಾಡ್ಬೇಕು. ಇದೊಂದೇ ಅಲ್ಲ, ಎರಡು ವರ್ಷ ಆದ್ಮೇಲೆ ಮತ್ತೊಂದು..."

"ಥೂ ನಿನ್ನ, ನಾಚಿಕೇನೇ ಇಲ್ವಲ್ಲೇ ನಿಂಗೆ?"

"ಅತ್ತೇ, ಸೀರಿಯಸ್ಸಾಗಿ ಹೇಳ್ತಿದೀನಿ. ಹಿರಿಯಪ್ಪಂಗೆ ಫೋನ್ ಮಾಡಿದೀನಿ. ಪಾಸ್‌ಪೋರ್ಟ್ ಮಾಡಿಸಿಕೊಳ್ಳೋಕೆ, ಮುಂದೆ ವೀಸಾ ತಗೊಳ್ಳೋಕೆ ಸಹಾಯ ಮಾಡ್ತಾನೆ ಹಿರಿಯಪ್ಪ..."

"ನಿನ್ನ ಅಮ್ಮ ಕೇಳಿದ್ರೆ ಹೊಟ್ಟೆಗೆ ಹಾಲು ಹುಯ್ಕಂತಾಳೆ. ಚೊಚ್ಚಲು ಬಾಣಂತನ ಮಾಡ್ಬೇಕಾಗಿದ್ದು ಅಮ್ಮ ಅಲ್ಲನೇ? ಹಿಂಗಿದ್ದೆಲ್ಲಾ ಮಾತಾಡ್ಬೇಡ ನೀನು."

"ನೀನು ನಂಗೆ ಅಮ್ಮಂಗಿಂತಾ ಹೆಚ್ಚು. ನನ್ನ ಮಕ್ಕಳನ್ನ ನೀನೇ ಸಾಕಿಕೊಡ್ಬೇಕು. ಇಲ್ಲ ಅಂದ್ರೆ ನಿನ್ಹತ್ರ ಮಾತಾಡಲ್ಲ ನಾನು."

"ನಿನ್ನಮ್ಮ..."

"ಅವಳಿಗೆ ಏನು ಹೇಳ್ಬೇಕು ಅನ್ನೋದನ್ನ ನಂಗೆ ಬಿಟ್ಬಿಡು. ದೇವ್ರು ನಡೆಸಿದ್ರೆ ನೀನು ನಂಜೊತೇನೇ... ಕೆಲಸ ಹುಡುಕ್ಕೋಬೇಕು ಅಂತ ನಂಗೂ ಆಸೆ ಉಂಟು."

"ನಿನ್ನ ಗಂಡನ್ನ ಕೇಳ್ದೆ ನೀನೇ ಯಜಮಾನಿಕೆ ಮಾಡು. ಕೈಗೆ ಕೋಲು ತಗಂತಾನೆ..."

"ಅವನು ನಾ ಹೇಳ್ದಂಗೆ ಕೇಳ್ತಾನೆ. ತಲೆಗೆ ಮೆಚ್ಚುಮದ್ದು ತಿಕ್ಕಿದೀನಿ"

"ಅದಕ್ಕೇ ಸೊಕ್ಕು ಏರಿ ಹೋಗಿದೆ ನಿಂಗೆ..." ಬಾಯಲ್ಲಿ ಹೀಗೆಂದರೂ ಸೊಸೆ ತನ್ನ ಮೇಲಿಟ್ಟಿದ್ದ ಪ್ರೀತಿಗೆ ಕಾವೇರಿಯ ಬಾಯಿ ಕಟ್ಟಿದಂತಾಯ್ತು. ಗಂಟಲು ಉಬ್ಬುಬ್ಬಿ, ಕಣ್ಣುಗಳು ತುಂಬಿಕೊಂಡು, ಹೇಗೆ ಗೊತ್ತಾಯ್ತೋ ಸೊಸೆಗೆ? "ಅಳ್ತಿದೀಯನೇ ಅತ್ತೆ?" ಕೇಳುತ್ತಿದ್ದಾಳೆ ಶುಭದಾ. ಕಾವೇರಿ ತಲೆ ಅಲುಗಿಸಿದ್ದು, ಕಣ್ಣ ನೀರು ಚೆಲ್ಲಾಪಿಲ್ಲಿಯಾಗಿ ಉದುರಿ ಬಿದ್ದಿದ್ದು, ಫೋನಿನ ಆ ತುದಿಯಲ್ಲಿ, ಬಹುದೂರದ ಮತ್ತೊಂದೇ ದೇಶದಲ್ಲಿ ಇದ್ದವಳಿಗೆ ಹೇಗೆ ಅರಿವಾಗಲು ಸಾಧ್ಯ?

## ವಸುಮತಿ ಉಡುಪ

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕಿನ ಕಿರಣಕೆರೆ ಸ್ವಗ್ರಾಮ. ಪ್ರಸ್ತುತ ಮೈಸೂರಿನಲ್ಲಿ ವಾಸ. ಕಥೆ, ಕಾದಂಬರಿ, ನಾಟಕ, ಶಿಶುಸಾಹಿತ್ಯ, ಪ್ರಬಂಧ ಸೇರಿದಂತೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬರವಣಿಗೆ. ಸಮಗ್ರ ಕಥಾ ಸಂಕಲನ ಮೂರು ಭಾಗಗಳಲ್ಲಿ ಪ್ರಕಟವಾಗಿದೆ. ಮಲೆನಾಡಿನ ಪರಿಸರ, ಭಾಷೆ, ಜೀವನಶೈಲಿ ವಸುಮತಿ ಉಡುಪ ಅವರ ಬಹುತೇಕ ಕತೆಗಳ ವಸ್ತು.